# ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಅಫಜಲಪೂರ.

## ಸಿಸಿ ನಂ.379/2023

ಫಿರ್ಯಾದಿಃ ಸರಕಾರದ ಪರವಾಗಿಃ ಅಫಜಲಪೂರ ಪೊಲೀಸ್ ಠಾಣೆ

-ಃಃ ವಿರುದ್ದ ಃಃ-

ಆರೋಪಿ/ತರುಃ 01. ಬಸಪ್ಪ ತಂದೆ ಶ್ರೀಮಂತರಾಯ ಬಶೇಟ್ಟಿ,
ವಃ 65 ವರ್ಷ, ಉಃ ಒಕ್ಕಲುತನ,

02. ಮಲ್ಲಮ್ಮ ಗಂಡ ಬಸಪ್ಪ ಬಶೇಟ್ಟಿ,
ವಃ 60 ವರ್ಷ, ಉಃ ಮನೆ ಕೆಲಸ,

03. ಈರಣ್ಣ ತಂದೆ ಬಸಪ್ಪ ಬಶೇಟ್ಟಿ,
ವಃ 35 ವರ್ಷ, ಉಃ ಒಕ್ಕಲುತನ,

04. ವಿಜಯಲಕ್ಷ್ಮಿ ಗಂಡ ಈರಣ್ಣ ಬಶೇಟ್ಟಿ,
ವಃ 30 ವರ್ಷ, ಉಃ ಮನೆ ಕೆಲಸ,

ಎಲ್ಲರ ವಾಸಃ ಬಡದಾಳ ಗ್ರಾಮ, ತಾಃ ಅಫಜಲಪೂರ,
ಜಿಃ ಕಲಬುರಗಿ.

----

## ದೋ ಷಾ ರೋ ಪ ಣೆ

ನಾನು ಶ್ರೀ ಅನಿಲ ಅಮಾತೆ., ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರು, ಅಫಜಲಪೂರ, ಈ ಮೂಲಕ ಕೆಳಕಂಡಂತೆ ನಿಮ್ಮನ್ನು ಆರೋಪಕ್ಕೆ ಗುರಿಪಡಿಸುತ್ತೇನೆ.

1. ದಿನಾಂಕ 10.06.2022 ರಂದು ಮಧ್ಯಾಹ್ನ 12-30 ಗಂಟೆಯ ಸುಮಾರಿಗೆ ಅಫಜಲಪೂರ ಪೋಲಿಸ್ ಠಾಣಾ ವ್ಯಾಪ್ತಿಯಲ್ಲಿ ಬರುವ ಬಡದಾಳ ಸಿಮಾಂತರದ ಹೊಲ ಸರ್ವೆ ನಂ.283/1 ನೇದ್ದರಲ್ಲಿ ಫಿರ್ಯಾದಿ ಚಾಸಾ-1 ಭಾಗ್ಯಶ್ರೀ ಮತ್ತು ಚಾಸಾ-5 ಅಂಬಾರಾಯ ರವರು ತಮ್ಮ ಹೊಲದಲ್ಲಿ ಸಾಗುವಳಿಗೆ ಹೋಗಿ ಹೊಲದಲ್ಲಿದ್ದಾಗ, 1 ರಿಂದ 4ನೇ ಆರೋಪಿತರಾದ ನೀವು ಫಿರ್ಯಾದಿ ಚಾಸಾ-1 ಭಾಗ್ಯಶ್ರೀ ರವರ ಹೊಲಕ್ಕೆ ಅಕ್ರಮ ಪ್ರವೇಶ ಮಾಡಿದ್ದು, ಆ ಮೂಲಕ ಆರೋಪಿತರಾದ ನೀವು ಭಾ.ದಂ.ಸಂ.ಕಲಂ.447 ಸಹವಾಚಕ ಕಲಂ.34ಅಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

2. ಮೇಲೆ ಹೇಳಲಾದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ 1 ರಿಂದ 4ನೇ ಆರೋಪಿತರಾದ ನೀವು ಫಿರ್ಯಾದಿ ಚಾಸಾ-1 ರವರ ಹೆಸರಿಗೆ ಇರುವ ಸರ್ವೆ ನಂ.283/1 ರ ಹೊಲಕ್ಕೆ ಹೋಗಿ ಫಿರ್ಯಾದಿ ಚಾಸಾ-1 ರವರಿಗೆ ಅಕ್ರಮವಾಗಿ ತಡೆದು ನಿಲ್ಲಿಸಿದ್ದು, ಆ ಮೂಲಕ ಆರೋಪಿತರಾದ ನೀವು ಭಾ.ದಂ.ಸಂ.ಕಲಂ.341 ಸಹವಾಚಕ ಕಲಂ.34 ಅಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

3. ಮೇಲೆ ಹೇಳಲಾದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ 1 ರಿಂದ 4ನೇ ಆರೋಪಿತರಾದ ನೀವು ಫಿರ್ಯಾದಿ ಚಾಸಾ-1 ರವರ ಹೆಸರಿಗೆ ಇರುವ ಸರ್ವೆ ನಂ.283/1 ರ ಹೊಲಕ್ಕೆ ಅಕ್ರಮ ಪ್ರವೇಶ ಮಾಡಿ, ಫಿರ್ಯಾದಿ ಚಾಸಾ-1 ರವರಿಗೆ ಈ ಹೊಲದಲ್ಲಿ ನಮಗೂ ಪಾಲು ಬರುತ್ತದೆ ಅಂತ ಜಗಳ ಮಾಡಿ "ರಂಡಿ, ಬೋಸಡಿ" ಅಂತಾ ಅವಾಚ್ಯ ಶಬ್ದಗಳಿಂದ ಬೈದು, ಅವಮಾನ ಪಡಿಸಿದ್ದು, ಚಾಸಾ-1 ರವರು ಸಮಾಜದ ಶಾಂತಿಯನ್ನು ಕೆಡಿಸುವಂತೆ ಚಾಸಾ-1 ರವರನ್ನು ಉದ್ರೇಕಿಸಿದ ಕಾರಣ ಆ ಮೂಲಕ ಆರೋಪಿತರಾದ ನೀವು ಭಾ.ದಂ.ಸಂ.ಕಲಂ.504 ಸಹವಾಚಕ ಕಲಂ.34 ಅಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

4. ಮೇಲೆ ಹೇಳಲಾದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆಗ ಫಿರ್ಯಾದಿ ಚಾಸಾ-1 ಭಾಗ್ಯಶ್ರೀ ರವರು ಯಾಕೆ ನಮ್ಮ ಸಂಗಡ ಸುಮ್ಮನೆ ಜಗಳ ಮಾಡುತ್ತಿದ್ದಿರಿ ಅಂತ ಅಂದಿದ್ದಕ್ಕೆ ನಿಮ್ಮಲ್ಲಿ 1ನೇ ಆರೋಪಿತನಾದ ನೀವು ಫಿರ್ಯಾದಿ  ಚಾಸಾ-1 ಭಾಗ್ಯಶ್ರೀ ರವರಿಗೆ ಕೈ ಹಿಡಿದು ಜಗ್ಗಾಡಿ ನಿನ್ನ ಗಂಡ ಅವಾಗಲೆ ಸತ್ತು ಹೋಗ್ಯಾನ ನಿನ್ನದು ಎಲ್ಲಿ ಹೊಲ ಬರುತ್ತದೆ ನಿಮ್ಮ ಅಪ್ಪನಿಗೆ ಕರೆದುಕೊಂಡು ಇಲ್ಲಿ ಯಾಕೆ ಬಂದಿದಿ ಅಂತಾ ಹಲಕಟ ಬೈದು, ಹೆಣ್ಣುತನಕ್ಕೆ ಅಗೌರವ ತೋರಿಸಿ ಅವಮಾನಗೊಳಿಸಿದ್ದು, ಆ ಮೂಲಕ ಆರೋಪಿತರಾದ ನೀವು ಭಾ.ದಂ.ಸಂ.ಕಲಂ.354(ಬಿ) ಸಹವಾಚಕ ಕಲಂ.34 ಅಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

5. ಮೇಲೆ ಹೇಳಲಾದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ 1 ರಿಂದ 4ನೇ ಆರೋಪಿತರಾದ ನೀವು ಫಿರ್ಯಾದಿ ಚಾಸಾ-1 ರವರ ಹೆಸರಿಗೆ ಇರುವ ಸರ್ವೆ ನಂ.283/1 ರ ಹೊಲಕ್ಕೆ ಅಕ್ರಮ ಪ್ರವೇಶ ಮಾಡಿ, ನಿಮ್ಮಲ್ಲಿ 1ನೇ ಆರೋಪಿತನಾದ ನೀವು ಫಿರ್ಯಾದಿ ಚಾಸಾ-1 ರವರಿಗೆ ಕೈಯಿಂದ ಕಪಾಳಕ್ಕೆ ಹೊಡೆದು, ಆಗ ಬಿಡಿಸಲು ಬಂದ ಚಾಸಾ-5 ಅಂಬಾರಾಯ ರವರಿಗೆ ಆರೋಪಿತರೆಲ್ಲರೂ ಸೇರಿ ಜಗ್ಗಾಡಿ ಕೈಯಿಂದ ಬೆನ್ನಿನ ಮೇಲೆ ಹೊಡೆದು ಸಾಮಾನ್ಯ ಸ್ವರೂಪದ ನೋವುಂಟು ಮಾಡಿದ ಕಾರಣ, ಆ ಮೂಲಕ ಆರೋಪಿತರಾದ ನೀವು ಭಾ.ದಂ.ಸಂ.ಕಲಂ.323 ಸಹವಾಚಕ ಕಲಂ.34 ಅಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ಅದು

ನನ್ನ ಸಂಜ್ಞೆತೆಗೆ ಬಂದಿರುತ್ತದೆ.

6. ಮೇಲೆ ಹೇಳಲಾದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆಗ ಚಾಸಾ-4 ಶಿವಪ್ಪ ರವರು ಬಂದು ಜಗಳ ಬಿಡಿಸಿ ಕಳುಹಿಸುತ್ತಿರುವಾಗ, 1 ರಿಂದ 4ನೇ ಆರೋಪಿತರಾದ ನೀವು ಫಿರ್ಯಾದಿ ಚಾಸಾ-1 ಭಾಗ್ಯಶ್ರೀ ಮತ್ತು ಚಾಸಾ-5 ಅಂಬಾರಾಯ ರವರಿಗೆ ಇನ್ನೊಮ್ಮೆ ನೀವು ಈ ಹೊಲಕ್ಕೆ ಬಂದರೆ ನಿಮಗೆ ಜೀವ ಸಹಿತ ಬಿಡುವುದಿಲ್ಲ ಅಂತಾ ಜೀವದ ಬೆದರಿಕೆ ಹಾಕಿದ ಕಾರಣ, ಆ ಮೂಲಕ ಆರೋಪಿತರಾದ ನೀವು ಭಾ.ದಂ.ಸಂ.ಕಲಂ.506 ಸಹವಾಚಕ ಕಲಂ.34 ಅಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

ಕಾರಣ ಮೇಲೆ ಹೇಳಿದ ಅಪರಾಧಗಳಿಗಾಗಿ ವಿಚಾರಣೆ ಎದುರಿಸಬೇಕೆಂದು ನಿರ್ದೇಶಿಸುತ್ತಿದ್ದೇನೆ.

**ಆರೋಪಿತರ ಹೇಳಿಕೆ**

ಪ್ರಃ-1) ಈ ಓದಿ ಹೇಳಲಾದ ದೋಷಾರೋಪಣೆಯನ್ನು ಕೇಳಿ ತಿಳಿದುಕೊಂಡಿರುವಿರಾ?

ಉಃ ಆ-1

ಆ-2

ಆ-3

ಆ-4

ಪ್ರಃ-2) ನಿಮ್ಮ ತಪ್ಪನ್ನು ಒಪ್ಪಿಕೊಳ್ಳುತ್ತಿರೊ ಅಥವಾ ವಿಚಾರಣೆ ನಡೆಯಬೇಕಾ?

ಉಃ ಆ-1

ಆ-2

ಆ-3

ಆ-4

(ದೋಷಾರೋಪಣೆಯನ್ನು ಆರೋಪಿತರಿಗೆ ಓದಿ ಹೇಳಿದ್ದು, ಅವರು ನೀಡಿದ ಹೇಳಿಕೆಯನ್ನು ಯಥಾವತ್ತಾಗಿ ದಾಖಲಿಸಿದ್ದು, ಅದು ಸಂಪೂರ್ಣ ಸತ್ಯವಾಗಿರುತ್ತದೆಂದು ಪ್ರಮಾಣೀಕರಿಸುತ್ತೇನೆ)

ದಿನಾಂಕಃ 21.01.2026 ಸಿವಿಲ್ ನ್ಯಾಯಾಧೀಶರು ಹಾಗೂ

C.C No. 379/2023

ಪ್ರ.ದ.ನ್ಯಾ.ದಂ. ಅಫಜಲಪೂರ.